# ತೋಳು ತೋಳು ತೋಳು ರಂಗ ತೋಳನ್ನಾಡೈ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 276
2. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchha Rayaru, page No. 14.
3. **Note:** Lyrics given here are as per Ref. 1. The wordings as per Ref. 2 are different and are not considered here.
4. **Note:** Singer has followed these lyrics.
5. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

ರಾಗ: ಮುಖಾರಿ ತಾಳ: ಆದಿ

ತೋಳು ತೋಳು ತೋಳು ರಂಗ ತೋಳನ್ನಾಡೈ, ಸ್ವಾಮಿ
ನೀಲವರ್ಣದ ಬಾಲಕೃಷ್ಣನೆ ತೋಳನ್ನಾಡೈ || ಪ ||

ಹುಲಿಯುಗುರರಳೆಲೆ ಮಾಗಾಯಿಗಳನಿಟ್ಟ ತೋಳನ್ನಾಡೈ, ಸ್ವಾಮಿ
ಘಲಿರೆಂಬಂದುಗೆ ಗೆಜ್ಜೆಲಿ ನಲಿವುತ್ತ ತೋಳನ್ನಾಡೈ
ನೆಲುವಿಗೆ ನಿಲುಕದೆ ಒರಳ ತಂದಿಟ್ಟ ತೋಳನ್ನಾಡೈ, ಸ್ವಾಮಿ
ಚೆಲುವ ಮಕ್ಕಳ ಮುದ್ದು ಮಾಣಿಕವೆ ತೋಳನ್ನಾಡೈ || 1 ||

ಪೂತನಿಯೆಂಬವಳಸುವನೆ ಹೀರಿದ ತೋಳನ್ನಾಡೈ, ಸ್ವಾಮಿ
ಮಾತೆಯ ಪಿತನ ಅಣುಗನ ಮಡುಹಿದ ತೋಳನ್ನಾಡೈ
ಮಾತಿಗೆ ಶಿಶುಪಾಲನ ಶಿರ ತರಿದ ತೋಳನ್ನಾಡೈ, ಸ್ವಾಮಿ
ಶ್ರೀ ತುಳಸಿಯ ಪ್ರಿಯ ನಿತ್ಯ ವಿನೋದಿ ತೋಳನ್ನಾಡೈ || 2 ||

ದಟ್ಟಡಿಯಿಡುತಲೆ ಬೆಣ್ಣೆಯ ಮೆಲುವ ತೋಳನ್ನಾಡೈ, ಸ್ವಾಮಿ
ಕಟ್ಟಿದ ಕರಡಿಯ ಕರುವೆಂದೆಳೆದಾ ತೋಳನ್ನಾಡೈ

ಬಟ್ಟಲ ಹಾಲ ಒಲ್ಲೆಂದು ಕಾಡಿದ ತೋಳನ್ನಾಡೈ, ಸ್ವಾಮಿ
ಬಟ್ಟಲೊಳುಣವಿಸೆ ನಗುವಾತನೆ ತೋಳನ್ನಾಡೈ || 3 ||

ಸಜ್ಜನ ಸತ್ಯಕೆ ಧರ್ಮವ ನಡೆಸಿದ ತೋಳನ್ನಾಡೈ, ಸ್ವಾಮಿ
ಅರ್ಜುನ ರಥಕೆ ಸಾರಥ್ಯ ಮಾಡಿದ ತೋಳನ್ನಾಡೈ
ಲಜ್ಜೆಗೀಡಾದ ದ್ರೌಪದಿ ಕಾಯ್ದ ತೋಳನ್ನಾಡೈ, ಸ್ವಾಮಿ
ವಜ್ರ ಪಂಜರ ಪಾಂಡವ ಪ್ರಿಯ ತೋಳನ್ನಾಡೈ || 4 ||

ನಖದಿಂದ ಹಿರಣ್ಯಕನುದರ ಬಗಿದ ತೋಳನ್ನಾಡೈ, ಸ್ವಾಮಿ
ಸುಖದಿಂದಲಿ ಪ್ರಹ್ಲಾದನ ಕಾಯ್ದ ತೋಳನ್ನಾಡೈ
ವಿಖಳಿತಗೆಡಿಸಿದ ಗೋಪ ಸ್ತ್ರೀಯರ ತೋಳನ್ನಾಡೈ, ಸ್ವಾಮಿ
ಸುಖತೀರ್ಥರ ಪತಿ ಪುರಂದರ ವಿಠಲ ತೋಳನ್ನಾಡೈ || 5 ||

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, gejje, makkalu, putani, tulasi, beNNe, hAlu, nage, satya, pandava, draupadi, vajra, Priya, asura, prahallada, gopi,
**Pravachana:** Vid. Ananthakrishna Achar
**Explanation:** NA